# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ: 08221-224311
08221-225551
E-mail: aeengd1@cescmysore.org

ರವರ ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ,
ಆರ್.ಪಿ.ರಸ್ತೆ, ನಂಜನಗೂಡು-571301.

ಸಂಖ್ಯೆ: ಸಕಾನಿಇಂ (ವಿ)/ಸಇಂ (ತಾ)/2017-18/405 - 408 ದಿನಾಂಕ: 14/6/2017

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ:24.05.2017 ರಂದು [redacted] ರ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್ (ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯ ನಡಾವಳಿಗಳು

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

| | | |
|---|---|---|
| 1. | ಶ್ರೀ ಎ.ಎ ಸುನೀಲ್ ಕುಮಾರ್ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 2. | ಶ್ರೀ ಆನಂದ್.ಸಿ.ಎಸ್ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 3. | ಶ್ರೀ ಷಫಿಯಾಉಲ್ಲಾ | ಲೆಕ್ಕಾಧಿಕಾರಿ ನಂಜನಗೂಡು ವಿಭಾಗ |
| 4. | ಶ್ರೀಮತಿ ವಿಜಯರತ್ನ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 5. | ಶ್ರೀ ಪುಟ್ಟಮಾದಯ್ಯ | ಲೆಕ್ಕಾಧಿಕಾರಿ(ಆಂತರಿಕ ಪರಿಶೋಧನೆ) |
| 6. | ಶ್ರೀಮತಿ ಹೇಮ.ಬಿ | ಸಹಾಯಕ ಇಂಜಿನಿಯರ್(ತಾಂತ್ರಿಕ) |
| 7. | ಶ್ರೀ ನಾಗೇಂದ್ರ ಮೇಸ್ತ್ರಿ | ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ |
| 8. | ಶ್ರೀ ವೀರೇಶ್ | ಸಹಾಯಕ ಇಂಜಿನಿಯರ್ ತಾಂಡವಪುರ ಶಾಖೆ |
| 9. | ಶ್ರೀ ಶಶಿಕಿರಣ್ | ಸಹಾಯಕ ಇಂಜಿನಿಯರ್ ಸಿಂದುವಳ್ಳಿಪುರ ಶಾಖೆ |
| 10. | ಶ್ರೀ ರಂಗಾಸ್ವಾಮಿ | ಕಿರಿಯ ಇಂಜಿನಿಯರ್ ಸುತ್ತೂರು ಶಾಖೆ |
| 11. | ಶ್ರೀಮತಿ ಲಕ್ಷ್ಮಿ | ಪ್ರಭಾರ ಸಹಾಯಕ ಲೆಕ್ಕಾಧಿಕಾರಿ |
| 12. | ಶ್ರೀ ಸುಂದರ್‌ರಾಜ್ | ಗ್ರಾಹಕ ಸಲಹಾಸಮಿತಿ ಸದಸ್ಯರು |
| 13. | ಶ್ರೀ ಸ್ವಾಮಿ | ಗ್ರಾಹಕ ಸಲಹಾಸಮಿತಿ ಸದಸ್ಯರು |
| 14. | ಶ್ರೀ ಎಂ.ಮಹದೇವು | ಗ್ರಾಹಕ ಸಲಹಾಸಮಿತಿ ಸದಸ್ಯರು |
| 15. | ಶ್ರೀ ಮಹದೇವ | ಗ್ರಾಹಕ ಸಲಹಾಸಮಿತಿ ಸದಸ್ಯರು |

ಸಭೆಯಲ್ಲಿ ಹಾಜರಿದ್ದ ಸಭೆಯ ಅಧ್ಯಕ್ಷರು, ಅಧಿಕಾರಿ/ಸಿಬ್ಬಂದಿ ವರ್ಗದವರು ,ಗ್ರಾಹಕ ಸಲಹಾ ಸಮಿತಿಯ ಸದಸ್ಯರು, ಪತ್ರಕರ್ತರನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಂಜನಗೂಡು ಉಪವಿಭಾಗ-1 ರವರು ಸ್ವಾಗತಿಸಿದರು.ಬೆಳಿಗ್ಗೆ 11.00 ಘಂಟೆಗೆ ಜನಸಂಪರ್ಕ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲಿಗೆ ಅಧೀಕ್ಷಕ ಇಂಜಿನಿಯರ್ ರವರ ಪರವಾಗಿ ಕಾರ್ಯನಿವಾಹಕ ಇಂಜಿನಿಯರ್ ರವರಾದ ಶ್ರೀ ಸುನಿಲ್ ಕುಮಾರ್ ರವರು ಸಭೆಯ ಉದ್ದೇಶ ಕುರಿತು ವಿವರಿಸಿದರು ನಂತರ ಗ್ರಾಹಕರು ತಮ್ಮ ಮೌಖಿಕ/ಲಿಖಿತ ಅಹವಾಲುಗಳನ್ನು ಸಲ್ಲಿಸಿದರು.

ಅಹವಾಲುಗಳ ವಿವರಗಳು:

1. ಶ್ರೀ ಗೋವಿಂದರಾಜ್,ಒಕ್ಕಲಗೇರಿ 2ನೇ ವಾರ್ಡ್ ನಂಜನಗೂಡು ರವರು ಸಿದ್ದಪ್ಪಾಜಿ ಗುಡಿ ಹಿಂಭಾಗ ಬೀದಿ ದೀಪ ಅಳವಡಿಸಲು 2 ವಿದ್ಯುತ್ ಕಂಬ ಹಾಕಿಸಲು ಕೋರಿದರು
2. ಶ್ರೀ ಮಹದೇವ ನಾಯಕ,ಚಿಕ್ಕಯ್ಯನ ಛತ್ರ ಗ್ರಾಮ ರವರು ಗ್ರಾಮಗಳಲ್ಲಿ ಬೀದಿ ದೀಪಗಳ ಸ್ವಿಚ್ on-off ಮಾಡಲು ಸರ್ವಿಸ್‌ಮ್ಯಾನ್ ರವರಿಗೆ ತಿಳಿಸಲು ಕೋರಿದರು. ಮತ್ತು ವಿದ್ಯುತ್ ತಂತಿಗಳಿಗೆ ಮರದ ಕೊಂಬೆಗಳು,ಗರಿಗಳು ತಗಲುತ್ತಿದ್ದು ಸರಿಪಡಿಸಲು ಕೋರಿದರು.
3. ಶ್ರೀ ಬಂಗಾರು,ಉಪ್ಪಿನಹಳ್ಳಿ ರವರು IP ಫೀಡರ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಕೊಡುವಂತೆ ಕೋರಿದರು.
4. ಶ್ರೀ ಸಾವುಲ್ ಅಮ್ಮೀದ್,ನಂಜನಗೂಡು ರವರು ಮೊದಲನೇ ಮಹಡಿಯಲ್ಲಿ ವಾಸವಿದ್ದು, ಮನೆ ಮುಂದೆ ಹಾದುಹೋಗಿರುವ ವಿದ್ಯುತ್ ತಂತಿಗಳು ತುಂಬಾ ಕೆಳಮಟ್ಟದಲ್ಲಿದ್ದು ಅಪಾಯದ ಸ್ಥಿತಿಯಲ್ಲಿರುವುದರಿಂದ ಅವುಗಳನ್ನು ಸರಿಪಡಿಸಲು ಕೋರಿದರು.
5. ಪರಶಿವಮೂರ್ತಿ,ಹೆಜ್ಜಿಗೆ ಗ್ರಾಮ, ರವರು ವಿದ್ಯುತ್ ಕಂಬ ತೆರವುಗೊಳಿಸಲು ಕೋರಿದರು.
6. ಶ್ರೀ ಪುಟ್ಟಮಾದೇಗೌಡ, ನಂಜನಗೂಡು, ರವರು ಮಾಪಕ ದೋಷ ಸರಿಪಡಿಸಲು ಕೋರಿದರು.
7. ಶ್ರೀ ಶ್ವೇತಾದ್ರಿಕುಮಾರ್, ದೇವಿನಗರ, ನಂಜನಗೂಡು, ರವರು
   - ಮಳೆಬಂದ ತಕ್ಷಣ ವಿದ್ಯುತ್ ಸಂಪರ್ಕ ಕಡಿದು ಹೋಗುತ್ತದೆ
   - ಗಣಪತಿ ಗುಡಿ ಹತ್ತಿರ G.O.S ನಿಂದ ಕಿಡಿ ಬೀಳುತ್ತಿರುತ್ತದೆ.
   - ಸೇವಾ ಕೇಂದ್ರದಲ್ಲಿ ದೂರವಾಣಿ ಕರೆಗಳನ್ನು ಸರಿಯಾಗಿ ಸ್ವೀಕರಿಸುವುದಿಲ್ಲ

   ಎಂದು ದೂರು ನೀಡಿ ಸರಿಪಡಿಸಲು ಕೋರಿದರು.
8. ಶ್ರೀ ಸುಂದರರಾಜ್, ಗ್ರಾಹಕ ಸಲಹಾ ಸಮಿತಿ ಸದಸ್ಯರು ನಂಜನಗೂಡು ರವರು LED ಬಲ್ಬುಗಳನ್ನು ವಿತರಿಸಲು ಕೋರಿದರು.
9. ಶ್ರೀಮತಿ ರಾಜಮ್ಮ B-17 F2 ಶಂಕರಪುರ ರವರು ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು.
10. ಶ್ರೀಮತಿ ಜಯಲಕ್ಷ್ಮಿ B-17 F1 ಶಂಕರಪುರ ರವರು ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು.
11. ಶ್ರೀ ಮಹದೇವಪ್ಪ, ಗ್ರಾಹಕ ಸಲಹಾಸಮಿತಿ ಸದಸ್ಯರು,ಕಳಲೆ ರವರು ಹೊಸಪುರ,ಬ್ಯಾಳರಹುಂಡಿ,ಸೂರಹಳ್ಳಿ ಗ್ರಾಮಗಳ ಕುಡಿಯುವ ನೀರು ಸ್ಥಾವರಗಳಿಗೆ ಗುಣಮಟ್ಟದ ವಿದ್ಯುತ್ ಸರಬರಾಜು ನೀಡುವಂತೆ ಕೋರಿದರು,ಮತ್ತು ಸೂರಳ್ಳಿ ಗ್ರಾಮದ ಕಬ್ಬಿಣದ ಕಂಬ ಬದಲಾಯಿಸುವಂತೆ ಕೋರಿದರು.
12. ಶ್ರೀ ಚಿಕ್ಕಣ್ಣ ವಿಶ್ವವಾಣಿ ಪತ್ರಿಕೆ ವರದಿಗಾರರು, ರವರು ನಾಗಮ್ಮ ಸ್ಕೂಲ್ ಆವರಣದಲ್ಲಿ ಹಾದುಹೋಗಿರುವ ವಿದ್ಯುತ್ ತಂತಿಗಳು ಕೆಳಮಟ್ಟದಲ್ಲಿದ್ದು ಸರಿಪಡಿಸಲು ಕೋರಿದರು.
13. ಶ್ರೀ ವಿಜಯಕುಮಾರ್, ಜನಸಂಗ್ರಾಮ ಪರಿಷತ್ ಹೋರಾಟಗಾರ, ನಗರ್ಲೆ ರವರು
   - ಅಭಿವೃದ್ಧಿ ಶುಲ್ಕ ಕಟ್ಟಿದ್ದ ದಾಖಲೆ ಕಡತಗಳ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ.
   - ಸರಿಯಾದ ಸಾಮಾಗ್ರಿ ಅಳವಡಿಸದೆ ಕಾಮಗಾರಿ ಕಳಪೆಯಿಂದ ಕೂಡಿರುತ್ತದೆ.
   - ಸೇತುವೆಯಿಂದ KIADB ಗೆ ಹೋಗುವ ರಸ್ತೆಯಲ್ಲಿ ಬೀದಿ ದೀಪಗಳು ಇರುವುದಿಲ್ಲ.
   - ಗ್ರಾಮಾಂತರ ಪ್ರದೇಶದಲ್ಲಿ ಹಗಲಿನಲ್ಲಿ ಬೀದಿ ದೀಪ ಉರಿಯುತ್ತಿರುತ್ತವೆ.

- ಹೆದ್ದಾರಿಯಲ್ಲಿ ಬೀದಿ ದೀಪ ಉರಿಯುತ್ತಿಲ್ಲ

ದೂರುಗಳನ್ನು ಎಂಬ ಸಲ್ಲಿಸಿರುತ್ತಾರೆ.

14. ಶ್ರೀ ಕೃಷ್ಣಮೂರ್ತಿ, 12ನೇ ಕ್ರಾಸ್ ಆರ್.ಪಿ ರೋಡ್ ನಂಜನಗೂಡು ರವರು ವಿದ್ಯುತ್ ತಂತಿಗೆಹೊಂಗೆ ಮರದ ಗರಿಗಳು ತಗಲುತ್ತಿದ್ದು ಸರಿಪಡಿಸಲು ಕೋರಿದರು.
15. ಶ್ರೀ ಡಿ.ವಿ. ರಾಜು, ದೇವರಸನಹಳ್ಳಿ,ಕುರುಬರ ಬೀದಿ ರವರು ಮಳೆ ಬಂದಾಗ 2-3 ದಿನ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ ಎಂದು ತಿಳಿಸಿದರು.
16. ಆಂದೋಲನ ಪತ್ರಿಕೆ ವರದಿಗಾರರು ಮಾತನಾಡಿ ನಗರಸಭೆ ನೀರು ಸರಬರಾಜು ಘಟಕಕ್ಕೆ ನಿರಂತರ ವಿದ್ಯುತ್ ಸರಬರಾಜು ಮಾಡುವಂತೆ ಕೋರಿದರು.
17. ಶ್ರೀ ನವೀನ್ ಕುಮಾರ್.ಕೆ.ಎಸ್,ಕಲ್ಕಳ್ಳಿ ರವರು 100KVA ಪರಿವರ್ತಕದ (Pump Set) ತಂತಿ ಆಗಾಗ ಕಟ್ ಆಗುತ್ತಿದ್ದು ಸದರಿ ತೊಂದರೆಯನ್ನು ಸರಿಪಡಿಸಿಕೊಡಲು ಕೋರಿದರು.
18. ಶ್ರೀ ವೆಂಕಪ್ಪಗೌಡ, ವಕೀಲರು,ನಂಜನಗೂಡು ರವರು ಸರ್ವೆ ನಂ 247/250, ದೇಬೂರು ಗ್ರಾಮ ಹಂಡುವಿನಹಳ್ಳಿ,ಅಕ್ಕಿ ಗಿರಣಿ ಹತ್ತಿರ ವಿದ್ಯುತ್ ತಂತಿಗಳು ಕೆಳಮಟ್ಟದಲ್ಲಿದ್ದು ಭಾರಿ ವಾಹನಗಳು ಸಂಚರಿಸುವಾಗ ತೊಂದರೆಯಾಗುತ್ತಿದೆ ಎಂದು ತಿಳಿಸಿರುದರು.
19. ಶ್ರೀ ರಾಜಣ್ಣ,ಕಳಲೆ ರವರು
    - 4 ಮನೆಗಳಿಗೆ ನಿರಂತರ ವಿದ್ಯುತ್ ಯೋಜನೆ ಫೀಡರ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ.
    - I.P Set ನ ವಿದ್ಯುತ್ ತಂತಿಗಳು ಸಡಿಲಗೊಂಡಿರುವುದನ್ನು ಸರಿಪಡಿಸಲು ಕೋರಿದರು.
20. ಶ್ರೀ ಮಂಜುನಾಥ,ಕಳಲೆ ರವರು I P ಫೀಡರ್‌ನ 63 KVA ಪರಿವರ್ತಕ ಕೆರೆ ಹತ್ತಿರ, ಕಂಬಗಳು ಬಾಗಿದ್ದು ಸರಿಪಡಿಸಲು ಕೋರಿದರು.

ಕಾರ್ಯನಿರ್ವಾಹಕ ಇಂಜನಿಯರ್ ನಂಜನಗೂಡು ವಿಭಾಗ ರವರು ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ ಸಭೆಯಲ್ಲಿ ಗ್ರಾಹಕರು ಮಂಡಿಸಿರುವ ದೂರುಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ತುರ್ತಾಗಿ ಅಗತ್ಯ ಕ್ರಮ ಕೈಗೊಳುವುದಾಗಿ ತಿಳಿಸಿದರು ಹಾಗೂ ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಹಕ ಇಂಜನಿಯರ್ ಮತ್ತು ಶಾಖಾಧಿಕಾರಿಗಳಿಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.ಸಹಾಯಕ ಕಾರ್ಯನಿರ್ವಹಕ ಇಂಜನಿಯರ್‌ರವರ ವಂದನಾರ್ಪಣೆಯೊಂದಿಗೆ ಸಬೆಯನ್ನು ಮುಕ್ತಾಯ ಗೊಳಿಸಲಾಯಿತು.

13/6/17

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ-I
ಚಾ.ವಿ.ಸ.ನಿ.ನಿ, ಸಂಜನಗೂಡು.

ಪ್ರತಿಯನ್ನು:
1) ಅಧೀಕ್ಷಕ ಇಂಜನಿಯರ್(ವಿ) ಕಾರ್ಯ ಮತ್ತು ಪಾಲನ ವೃತ್ತ, ಕುವೆಂಪುನಗರ ಮೈಸೂರು ರವರ ಅವಗಾಹನೆಗಾಗಿ
2) ಕಾರ್ಯನಿರ್ವಾಹಕ ಇಂಜನಿಯರ್(ವಿ) ಕಾ ಮತ್ತು ಪಾ ವಿಭಾಗ ನಂಜನಗೂಡು ರವರ ಅವಗಾಹನೆಗಾಗಿ
3) ಸಂಬಂದ ಪಟ್ಟ ಶಾಖಾಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಮು.ಕಡತ